**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**<u>ಸಿ.ಸಿ.ನಂ. 51/2015</u>**

**ದಿನಾಂಕಃ 28.02.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿಯ ಹೆಸರು ಃ | | ಕರಿಯಪ್ಪ | ಚಾಸಾ-8, ಪ್ರಾ.ಸ.-9 |
| ತಂದೆಯ ಹೆಸರು | ಃ | ಗಿಡ್ಡಮರಿಯಪ್ಪ | |
| ವಯಸ್ಸು | ಃ | 84 ವರ್ಷ | |
| ಉದ್ಯೋಗ | ಃ | ವ್ಯವಸಾಯ | |
| ವಾಸ | ಃ | ಜಿಗಣೇಹಳ್ಳಿ | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ಆರೋಪಿತರ ಪರಿಚಯ ಇರುವುದಿಲ್ಲ. ನನಗೆ ಯಾವುದೇ ವಿಷಯ ತಿಳಿದಿರುವುದಿಲ್ಲ. ನನ್ನ ಮುಂದೆ ಯಾವುದೇ ಮಹಜರ್ ಮಾಡಿರುವುದಿಲ್ಲ ಮತ್ತು ಮಾದರಿ ಸಹಿಗಳನ್ನು ಪಡೆದಿರುವುದಿಲ್ಲ. ಸಾಕ್ಷಿಯು ಮಹಜರ್ ನಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-18 ಎಂದು, ಸಾಕ್ಷಿ ಸಹಿಯನ್ನು ನಿಪಿ-18(ಬಿ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)**

<u>ಪಾಟೀಸವಾಲುಃ ಮಾನ್ಯ ಸಸಅ. ರವರಿಂದ ಃ</u>

ದಿಃ 24.12.2012 ರಂದು ನನ್ನ ಮತ್ತು ಚಾಸಾ-9 ರವರಿಗೆ ಪೋಲಿಸರು ನೋಟಿಸು ನೀಡಿ ಮಹಜರ್ ಗೆ ಬರಲು ತಿಳಿಸಿದ್ದರು ಎಂದರೆ ಸರಿಯಲ್ಲ. ಆದಿನ ಪೋಲಿಸರು ಆರೋಪಿ 1 ಮತ್ತು 2 ರವರಿಂದ ಚಾಸಾ-1 ರವರ ಮಾದರಿ ಸಹಿಗಳನ್ನು ಸಂಜೆ 5.30 ರಿಂದ 6.00 ಗಂಟೆವರೆಗೆ ಪಡೆದುಕೊಂಡರು ಎಂದರೆ ಸರಿಯಲ್ಲ. ಸದರಿ ಸಹಿಗಳ ಪ್ರತಿಗಳಿಗೆ ನಾನು ಮತ್ತು ಚಾಸಾ-8 ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ. ( ಆರೋಪಿಗಳು ಚಾಸಾ-1 ರವರ ಸಹಿಗಳನ್ನು ಕ್ಯೂಡಿ-7 ರಿಂದ 18 ರವರೆಗೆ ಹಾಕಿರುತ್ತಾರೆ. ಕ್ಯೂಡಿ-9 ರಿಂದ 13 ಹಾಗೂ 16 ರಲ್ಲಿ ಸಹಿಗಳ ಭಾಗ ಹರಿದು ಹೋಗಿರುತ್ತದೆ ) ಸಾಕ್ಷಿಯು ಕೆಲವು ದಾಖಲೆಗಳಲ್ಲಿ ತನ್ನ ಸಹಿ ನೋಡಿ ಗುರುತಿಸಿರುತ್ತಾರೆ ಆದ್ದರಿಂದ ಕ್ಯೂಡಿ-7 ರಿಂದ 18 ನ್ನು ಒಟ್ಟಾಗಿ ನಿಪಿ-19 ಎಂದು, ಸಾಕ್ಷಿಯ ಸಹಿಯನ್ನು ನಿಪಿ-19(ಬಿ) ಎಂದು ಗುರುತಿಸಲಾಯಿತು.

<u>ಪಾಟೀಸವಾಲುಃ ಶ್ರೀ ಬಿ ಆರ್ ಆರೋಪಿ ಪರ ವಕೀಲರಿಂದಃ ಇರುವುದಿಲ್ಲ.</u>

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಎ ಒ

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.